## ಆಕರ್ಷಕ ವಿನ್ಯಾಸದ ಬಾವಿ



17ನೇ ಶತಮಾನದಲ್ಲಿ ನಿರ್ಮಿಸಲಾದ ಆಕರ್ಷಕ ವಿನ್ಯಾಸದ ಈ ಬಾವಿಯು ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯ ಚಂದ್ರಶೇಖರಪುರಂ ಎಂಬಲ್ಲಿದೆ. ಇದನ್ನು ಸ್ಥಳೀಯವಾಗಿ ದೊರೆಯುವ ಕೆಂಪು ಕಲ್ಲಿನಿಂದ ನಿರ್ಮಿಸಲಾಗಿದ್ದು, ಆಕರ್ಷಕ ಕುದುರೆ ಲಾಳದ ಆಕಾರದ ವಾಸ್ತುವಿನಿಂದ ಕೂಡಿದೆ. ಬೃಹತ್ ಪ್ರಮಾಣದ ನೀರನ್ನು ಇದರಲ್ಲಿ ಶೇಖರಿಸಬಹುದಾಗಿದ್ದು, ಇದರಲ್ಲಿ ಸಂಗ್ರಹವಾಗುವ ನೀರನ್ನು ಇಂದಿಗೂ ಇಲ್ಲಿನ ಜನ ಬಳಸುತ್ತಿದ್ದಾರೆ. ಇದರಲ್ಲಿ ಸಂಗ್ರಹವಾಗಿದ್ದ ಹೂಳನ್ನು ಈಚೆಗೆ ತೆಗೆದು ಬಾವಿಯನ್ನು ಸ್ವಚ್ಛಗೊಳಿಸಲಾಯಿತು

ಕೆ.ವಿ. ಸಂತೋಷ್, ಚಿತ್ರದುರ್ಗ



## ಬಲು ಅಪರೂಪದ ಚಕ್ರತೀರ್ಥ ಕೋಟಿಲಿಂಗ

ಬಳ್ಳಾರಿಯ ವಿಜಯನಗರದ ಹಂಪಿ ನೆಲೆಬೀಡಿನಲ್ಲಿ ಈ ಚಕ್ರತೀರ್ಥ ಕೋಟಿಲಿಂಗ ಕಂಡುಬರುತ್ತದೆ. ಇವು ಪ್ರವಾಸಿಗರ ಕಣ್ಣಿಗೆ ಕಾಣುವುದು ಬಲು ಅಪರೂಪ. ಕಾರಣ, ತುಂಗಭದ್ರಾ ನದಿಯಲ್ಲಿನ ಕೋದಂಡರಾಮ ದೇವಸ್ಥಾನದ ಮುಂಭಾಗ ಈ ಚಕ್ರತೀರ್ಥ ಕೋಟಿಲಿಂಗವಿದೆ. ಸುಂದರ ಆಕೃತಿಯ ಪಾಣಿ ಪೀಠ ಅದರಲ್ಲಿ ಹತ್ತಾರು ಲಿಂಗಗಳು ಇದ್ದು, ನೋಡುಗರ ಮನಸೆಳೆಯುತ್ತವೆ. ನದಿನೀರು ತಗ್ಗಿದಾಗ ಮಾತ್ರ ಇದರ ದರ್ಶನ ಸಾಧ್ಯ. ನದಿ ಮೈದಡವಿ ಬೋರ್ಗರೆಯುವಾಗ ಇದು ಕಾಣದು.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

## ಕಲ್ಲಿನಿಂದ ಮಾಡಿದ ಕಲಸಾರೆ



ನಮ್ಮ ಪೂರ್ವಜರು ಮಣ್ಣಿನ ಮಡಿಕೆಗಳಿಂದ ಅಡುಗೆ ಮಾಡುತ್ತಿದ್ದರು. ಮಣ್ಣಿನ ಮಡಿಕೆಗೆ ಪರ್ಯಾಯವಾಗಿ ಕೆಲವರು ಪಾತ್ರೆಗಳ ಆಕಾರದಲ್ಲಿ ಕಲ್ಲಿನಿಂದ ವಸ್ತುಗಳನ್ನು ಮಾಡಿ ಅವುಗಳನ್ನು ಬಳಸಿ ಅಡುಗೆ ಮಾಡುತ್ತಿದ್ದರು. ಈ ಚಿತ್ರದಲ್ಲಿ ಕಾಣುತ್ತಿರುವ ಪಾತ್ರೆಯಾಕಾರದ ವಸ್ತುವಿನ ಹೆಸರು ಕಲಸಾರೆ. ಇದನ್ನು ಹಿಂದೆ ಸಾರು (ಸಾಂಬಾರು) ಮಾಡಲು ಬಳಸುತ್ತಿದ್ದರು. ಇದನ್ನು ಕಲ್ಲಿನಿಂದ ಮಾಡಿರುವುದು ವಿಶೇಷ. ನಮ್ಮ ಅಜ್ಜಿ ಕಾಲದಲ್ಲಿ ಇದರಲ್ಲಿ ಸಾರು ಮಾಡಿ ತಿಂದ ನೆನಪಿದೆ.

ಎಸ್.ಎನ್. ಮಹಾಬಲರಾವ್,
ನರಸಿಂಹರಾಜಪುರ